ಇದೆ, ಆ ಕಾರ್ಪೋರೇಷನ್ ಮುಖಾಂತರವೇ ನಡೆದಿದೆ. ಅವರೇ ರಾಜೀವ್ ಗಾಂಧಿ ಹೌಸಿಂಗ್ ಸ್ಕೀಮ್‌ಗೆ ಹಣ ಕೊಟ್ಟಿದ್ದಾರೆ. ಅವರೇ ಮುನಿಸಿಪಾಲಿಟಿಗಳಿಗೆ ಹಣ ಕೊಟ್ಟಿದ್ದಾರೆ. "ಇಲ್ಲ" ಎಂದು ವಾದ ಮಾಡಿದರೆ ಹೇಗೆ? ಇದಕ್ಕೆ ಏನಾದರೂ ಜವಾಬ್ದಾರಿ ಬೇಡವೇ?

ಅಧ್ಯಕ್ಷರು : ಮಾನ್ಯ ಕಾರಜೋಳರವರೇ, ಮಾನ್ಯ ಸಚಿವರು ಹೊಸಬರು ಇದ್ದಾರೆ, ಅಧಿಕಾರಿಗಳು ಏನು ಮಾಹಿತಿ ಕೊಟ್ಟಿದ್ದಾರೆ, ಅದರ ಪ್ರಕಾರ ಉತ್ತರ ಕೊಟ್ಟಿದ್ದಾರೆ. ನೀವು, ಹಿಂದೆ ಈ ಯೋಜನೆ ಇತ್ತು, ನನ್ನ ಕ್ಷೇತ್ರದಲ್ಲೇ ಈ ಕೆಲಸಗಳಾಗಿದೆ ಎನ್ನುವುದನ್ನು ಹೇಳಿದ್ದೀರಿ. ಅದನ್ನು ಮಾನ್ಯ ಸಚಿವರು ನೋಡುತ್ತಾರೆ. ಏನಾದರೂ ತಪ್ಪಾಗಿದ್ದರೆ, ಅದನ್ನು ಸರಿಪಡಿಸಿ ಅವರ ಇಲಾಖೆಯ ಅಧಿಕಾರಿಗಳಿಗೆ ಏನು ಆದೇಶ ಮಾಡಬೇಕೋ ಅದನ್ನು ಮಾಡುತ್ತಾರೆ.

ಶ್ರೀ ಗೋವಿಂದ ಎಂ. ಕಾರಜೋಳ್ : ಅಧಿಕಾರಿಗಳ ಮೇಲೆ ಕ್ರಮ ತೆಗೆದುಕೊಳ್ಳಬೇಕು. ಸದನದಲ್ಲಿ ಈ ರೀತಿ ಉತ್ತರ ಕೊಟ್ಟರೆ ಹೇಗೆ?

ಅಧ್ಯಕ್ಷರು : ಮಾನ್ಯ ಸದಸ್ಯರುಗಳಲ್ಲಿ, ಈಗ ಪ್ರಶ್ನೋತ್ತರ ಎರಡು ಗಂಟೆ ಮೀರಿ ನಡೆಯುತ್ತಾ ಇದೆ. ಈ ರೀತಿ ಪ್ರಶ್ನೋತ್ತರವನ್ನು ನಡೆಸಲಿಕ್ಕೆ ಸಾಧ್ಯವಿಲ್ಲ. ಕ್ಷೇತ್ರಕ್ಕೆ ಸಂಬಂಧಪಡದೇ ಇರತಕ್ಕಂಥ ಸಾರ್ವಜನಿಕ ಮಹತ್ವದ ಪ್ರಶ್ನೆಗಳಿಗೆ ಆ ಸದಸ್ಯರು ಅಲ್ಲದೇ ಬೇರೆಯವರಿಗೆ ಒಂದು ಅಥವಾ ಎರಡು ಉಪ ಪ್ರಶ್ನೆಗಳನ್ನು ಕೇಳುವುದಕ್ಕೆ ಅವಕಾಶ ಮಾಡಿಕೊಡುತ್ತೇನೆ. ಯಾವುದೇ ಸಂದರ್ಭದಲ್ಲೂ ಒಂದೂವರೆ ಗಂಟೆಗಿಂತ ಹೆಚ್ಚು ಪ್ರಶ್ನೋತ್ತರವನ್ನು ನಡೆಸುವುದಕ್ಕೆ ಸಾಧ್ಯ ಆಗುವುದಿಲ್ಲ. ಏನದರೂ ಅದೇ ತರಹ ಆದರೆ, ಅಲ್ಲಿಗೆ ನಾನು ಮುಕ್ತಾಯ ಮಾಡುತ್ತೇನೆ. ಪ್ರಶ್ನೆಗಳು ಲ್ಯಾಪ್ಸ್ ಆಗುತ್ತದೆ, ಏನೂ ಮಾಡುವುದಕ್ಕೆ ಆಗುವುದಿಲ್ಲ. ಅದಕ್ಕೆ ಎಲ್ಲರೂ ಸಹಕರಿಸಬೇಕೆಂದು ನಾನು ಕೇಳಿಕೊಳ್ಳುತ್ತೇನೆ.

2) ಚುಕ್ಕೆ ಗುರುತಿಲ್ಲದ ಪ್ರಶ್ನೆಗಳಿಗೆ ಲಿಖಿತ ಮೂಲಕ ನೀಡಲಾದ ಉತ್ತರಗಳು

ಶ್ರೀ ಹೆಚ್.ಕೆ. ಪಾಟೀಲ್ (ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವರು) : ಮಾನ್ಯ ಅಧ್ಯಕ್ಷರೇ, ದಿನಾಂಕ 28-1-05ರ 4ನೇ ಪಟ್ಟಿಯ ಲಿಖಿತ ಮೂಲಕ ಉತ್ತರಿಸುವ 155 ಪ್ರಶ್ನೆಗಳ ಪೈಕಿ 90 ಉತ್ತರಗಳನ್ನು ಸದನದಲ್ಲಿ ಮಂಡಿಸುತ್ತಿದ್ದೇನೆ. (ಅನುಬಂಧ-1)

ಅಧ್ಯಕ್ಷರು : ಮಂಡಿಸಲಾಗಿದೆ.